**ಮಾಹಿತಿಪೂರ್ಣ**

'ಸಿನಿಮಾ ಮತ್ತು ರಿಯಾಲಿಟಿ', ಚ.ಹ. ರಘುನಾಥ ಅವರ ಮುಖಪುಟ ಲೇಖನ (ಸುಧಾ, ಜುಲೈ 12) ಮಾಹಿತಿಪೂರ್ಣ. ರಮೇಶ್ ಅರವಿಂದ್ ಭಾವಚಿತ್ರ ಹೊತ್ತ ಮುಖಪುಟವೂ ಆಕರ್ಷಕ.

—ಕೆ.ಎಂ. ಮಧ್ವರಾಯ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ಮುಕುಂದ ಹೆರಕಲ್ಲ ಕಲಬುರ್ಗಿ




**ಶಿಕ್ಷಣ ಪದ್ಧತಿ**

'ನಿಮ್ಮೊಡನೆ'ಯಲ್ಲಿ 'ಶಿಕ್ಷಕರು ಸಿದ್ಧರಿದ್ದಾರೆಯೇ?' (ಎನ್. ಉದಯಕುಮಾರ) ಪ್ರಶ್ನೆ ಸ್ವಾಭಾವಿಕ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪದ್ಧತಿಯಲ್ಲಿ ಏನೇ ಕುಂದು ಕೊರತೆಗಳಿದ್ದರೂ ಐದು ವರ್ಷ ಅವಧಿಯ ಪ್ರಯೋಗಶಾಲೆಗಳಲ್ಲ, ಎಲ್ಲ ಮಕ್ಕಳೂ ಪ್ರನಾಳ ಶಿಶುಗಳಲ್ಲ ಎಂಬುದನ್ನು ಸರಕಾರ ಅರಿತುಕೊಳ್ಳಬೇಕು.

—ರಾಜಶೇಖರ ಹಾದಿಮನಿ, ಧಾರವಾಡ, ನರೇಂದ್ರ ಸಿರಕಜೆ ಮೈಸೂರು, ಶಿವರೆಡ್ಡಿ ಹ. ಅಂಗಡಿ ಹುಬ್ಬಳ್ಳಿ

**ಅರ್ಥಪೂರ್ಣ**

'ಏಕೆಂದರೆ..' (ದೇವಿದಾಸ ಸುವರ್ಣ) ಹಾಸ್ಯ ಬರಹ ಅರ್ಥಪೂರ್ಣವಾಗಿತ್ತು. ಅವರು ರಚಿಸಿದ ವ್ಯಂಗ್ಯಚಿತ್ರ ಗಮನಸೆಳೆಯಿತು.

—ರವೀಂದ್ರನಾಥ ಶಿ. ಯಡಹಳ್ಳಿ ಬೀಳಗಿ, ಮಧುರ ಸುಬ್ರಹ್ಮಣ್ಯ ಬೆಂಗಳೂರು

**ಕಥೆ ಚೆನ್ನಾಗಿದೆ**

ಕಥೆ 'ಮರವಿದ್ದು ಫಲವೇನು?' (ಬಸು ಬೇವಿನಗಿಡದ) ಚೆನ್ನಾಗಿದೆ. ಬಡತನ ದಲ್ಲೂ ನಗು ನಗುತಾ ಬಾಳು ಸಾಗಿಸುತ್ತಿದ್ದ ಪಾರವ್ವ ಮಗ ಪರಮೇಶಿಯನ್ನು ಬೆಳೆಸಿದ ರೀತಿ ಇತರೆ ತಾಯಿಯರಿಗೆ ಮಾದರಿ.

—ಕೊಹಿಮ ಬಸರಕೋಡು

**ಭಯವನ್ನು ಮೆಟ್ಟಿ ನಿಲ್ಲಬೇಕು**

'ಸ್ಕೈ ಡೈವಿಂಗ್' (ಡಾ.ಪ್ರೇಮಲತ ಬಿ.) ಬರಹ ರೋಚಕ. ಇಲ್ಲಿ ಭಯವನ್ನು ಮೆಟ್ಟಿ ನಿಲ್ಲುವ ಮನಸ್ಥಿತಿ ಮುಖ್ಯ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

**ಉತ್ತಮ ಮಾಹಿತಿ**

ಆರೋಗ್ಯ ಲೇಖನ 'ಹೈಪೋಥೈರಾಯ್ಡಿಸಮ್' (ಡಾ.ವಿನಯ ಶ್ರೀನಿವಾಸ್) ಕಾಯಿಲೆಯ ಚಿಕಿತ್ಸೆ, ಗಮನದಲ್ಲಿಡಬೇಕಾದ ಅಂಶದ ಬಗ್ಗೆ ಉತ್ತಮ ಮಾಹಿತಿ ನೀಡಿತು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು

**ಚಿಂತನೆ ಒರೆಗೆ ಹಚ್ಚುವ ಬರಹ**

'ತಾಳ್ಮೆಗಿಂತ ಮಿಗಿಲಾದುದಿಲ್ಲ' (ಸವಿತಾ ಸಚ್ಚಿದಾನಂದ) ಚಿಂತನೆಗೆ ಹಚ್ಚುವ ಲೇಖನ. ಹಣದಿಂದಲೇ ಸುಖ ಎನ್ನುವ ಹುಚ್ಚು ಕಲ್ಪನೆಯಿಂದ ನಿಜವಾದ ಸುಖದಿಂದ ವಂಚಿತರಾಗುತ್ತಿರುವ ಇಂದಿನ ತಲೆಮಾರಿನವರು ಇಂತಹ ಲೇಖನ ಗಳನ್ನು ಓದುವುದಷ್ಟೇ ಅಲ್ಲದೆ ಅರ್ಥ ಮಾಡಿಕೊಂಡು ಬದುಕುವಂತಾಗಬೇಕು.

—ಬಿ. ಚಂದ್ರೇಗೌಡ ಬೆಂಗಳೂರು, ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ರುಕ್ಮಿಣಿ ಕೃ.ದೇಶಪಾಂಡೆ ಗೋಕಾಕ, ಸುಂದರ್ ಬೆಂಗಳೂರು

**ಜನಪ್ರಿಯತೆಗೆ ಸಾಕ್ಷಿ**

'ಕೊಲ್ಲಿಯಲ್ಲಿ ಕೆಲವು ದಿನ' (ವಸಂತ ಹೊಸಬೆಟ್ಟು) ಬರಹ ಆಪ್ತ. ನಮ್ಮ ನಿಮ್ಮ ನೆಚ್ಚಿನ 'ಸುಧಾ' ಓಮನ್‌ನಲ್ಲೂ ಲಭ್ಯ ಎನ್ನುವುದು ಈ ವಾರಪತ್ರಿಕೆಯ ಜನಪ್ರಿಯತೆಗೆ ಒಂದು ಸಾಕ್ಷಿ.

—ಪಿ. ಜಯವಂತ ಪೈ, ಕುಂದಾಪುರ, ವಿ.ಹೇಮಂತ ಕುಮಾರ್ ಬೆಂಗಳೂರು

**ಕೃಷಿಯಲ್ಲಿ ದೊಡ್ಡ ಸಾಧನೆ**

'ಕಲ್ಲರಳಿ ಕೃಷಿಯಾಗಿ' (ಧರ್ಮಾನಂದ ಶಿರ್ವ) ಕೃಷಿಯಲ್ಲಿ ಆಸಕ್ತಿ ಇರುವವರಿಗೆ ಒಂದು ಉತ್ತಮ ಲೇಖನ. ಯುವ ಕೃಷಿಕ ಸಂತೋಷ್ ಅವರದು ಕೃಷಿಯಲ್ಲಿ ಖಂಡಿತವಾಗಿಯೂ ದೊಡ್ಡ ಸಾಧನೆ. ಕೃಷಿಕರಿಗೆ ಒಳ್ಳೆಯ ಮಾರ್ಗದರ್ಶನ ನೀಡಿದೆ ಈ ಬರಹ. ಪ್ರತಿಯೊಬ್ಬ ಕೃಷಿಕನೂ ಓದಲೇಬೇಕು.

—ಮೇ.ಗೋ. ಸುಬ್ಬಣ್ಣ ಮೇಗರವಳ್ಳಿ

**ಭುಲೇಶ್ವರ ಬೆಟ್ಟ**

ಪ್ರವಾಸ ಲೇಖನ 'ಬಿಟ್ಟೇನೆಂದರೂ ಬಿಡದು ಭುಲೇಶ್ವರ ಬೆಟ್ಟ' (ಪ್ರಸಾದ್ ಶೆಣೈ ಆರ್.ಕೆ.) ಲೇಖನ ಸೊಗಸಾಗಿದೆ. ಭಾರತದ ಪ್ರಸಿದ್ಧ ಐತಿಹಾಸಿಕ ಸ್ಮಾರಕಗಳಲ್ಲಿ ಒಂದಾಗಿರುವ ಮಹಾರಾಷ್ಟ್ರದಲ್ಲಿರುವ ಭುಲೇಶ್ವರ ಬೆಟ್ಟದ ಸಚಿತ್ರ ಪರಿಚಯ ಚೆನ್ನಾಗಿದೆ.

—ಎಸ್. ಚನ್ನಪ್ಪ, ಮೈಸೂರು

**ಸ್ಫೂರ್ತಿದಾಯಕ**

'ಸರ್ಕಾರಿ ಶಾಲೆಯಲ್ಲಿ ಇಂಗ್ಲಿಷ್ ಪಾಠ' (ಮಂಜುಳಾರಾಜ್) ಬರಹ ನಿಜಕ್ಕೂ ಸ್ಫೂರ್ತಿದಾಯಕವಾಗಿದೆ. ಆಶಾ ಸಂಸ್ಥೆಯ ಸ್ವಯಂ ಸೇವಕಿಯರು ಅಭಿನಂದನಾರ್ಹರು. ಗ್ರಾಮೀಣ ಪ್ರದೇಶದ ಮಕ್ಕಳಿಗೂ ಕೂಡ ಇಂಗ್ಲಿಷ್ ಕಬ್ಬಿಣದ ಕಡಲೆಯಾಗಿರುತ್ತದೆ. ಆ ಶಾಲೆಗಳಿಗೂ ಇಂಥ ಸಂಸ್ಥೆ ಹಾಗೂ ಸ್ವಯಂ ಸೇವಕಿಯರ ಸೇವೆ ದೊರೆತಿದ್ದರೆ ತುಂಬಾ ಒಳ್ಳೆಯದಾಗುತ್ತಿತ್ತು.

—ನಿರ್ಮಲಾ ಶ್ರೀನಿವಾಸ್ ಬೆಂಗಳೂರು

**'ಸುಧಾ ಅತ್ಯಾಕರ್ಷಕ'**

'ಸುಧಾ' ವಾರಪತ್ರಿಕೆ ಅತ್ಯಾಕರ್ಷಕವಾಗಿ ಬರುತ್ತಿದೆ. 'ಸುಧಾ'ಕ್ಕೆ 1.50 ರೂಪಾಯಿ ಇರುವಾಗಲಿಂದಲೂ ಅಂದರೆ ಕಳೆದ 40 ವರ್ಷಗಳಿಂದ ನಾನು ಇದರ ಓದುಗ. ವಿದ್ಯುನ್ಮಾನ ಮಾಧ್ಯಮಗಳು ಪ್ರಭಾವ ಬೀರುತ್ತಿರುವ ಇಂದೂ 'ಸುಧಾ' ಓದುಗರನ್ನು ಸೆಳೆಯುತ್ತಿರುವುದರಲ್ಲಿ ಸಂಶಯವಿಲ್ಲ.

—ಸೋಮಣ್ಣ ಡಿ.ಎಸ್. ಬೆಂಗಳೂರು

**ಸಂಗ್ರಹಯೋಗ್ಯ**

* ನೆಚ್ಚಿನ 'ಸುಧಾ', ಕಾಯುವೆನು ಗುರುವಾರ 'ಸದಾ'
*ಕಥೆಗಳು, ಮಕ್ಕಳ ಕವನಗಳು, ಲೇಖನಗಳು ಎಲ್ಲ ಸೊಗಸು
* ಎಲ್ಲವೂ ಸಂಗ್ರಹಯೋಗ್ಯ; ಇದುವೇ ಕನ್ನಡ 'ಭಾಗ್ಯ'
* ಎಷ್ಟೋ ವರುಷದಿಂದ 'ಅಭಿಮಾನಿ' ಕನ್ನಡದ 'ಚಾಂದಿನಿ'
* ಎಲ್ಲ ಲೇಖನಗಳೂ'ಉತ್ತಮ'; ಮುಖಪುಟ ಅತ್ಯುತ್ತಮ!

— ಕೆ. ಹರೀಶ್‌ಕುಮಾರ, ಪುತ್ತೂರು

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460